ವೋಡ್ಕಾವನ್ನ ಬಟ್ಟಲಿಗೆ ಬಗ್ಗಿಸುತ್ತ ಅದರ ಘಮವನ್ನ ರೂಮಿನ ತುಂಬ ತುಂಬಿಸಿದ.

ಶಿಚಿಪ್‌ತ್ಸೋವ್ ಉತ್ತರಿಸಲಿಲ್ಲ. ಆದರೆ ಸಿಗೇವ್‌ನೆಡೆಗೆ ಸುಮ್ಮನೆ ದಿಟ್ಟಿಸಿ ನೋಡಿದ. ಅವನ ಕಣ್ಣುಗಳ ಕೆಳಭಾಗದಲ್ಲಿ ಮೇಕಪ್‌ನ ಬಣ್ಣದ ಕಲೆ ಹಾಗೇ ಉಳಿದುಕೊಂಡಿತ್ತು.

'ನಿನ್ನ ಕಣ್ಣುಗಳಲ್ಲಿ ಅವಮಾನದ ಛಾಯೆ ಇದೆ. ಈ ನಿನ್ನ ಹತಾಶ ಮುಖಭಾವವನ್ನ ಒಂದಿಷ್ಟು ಒರೆಸಿಕೋಬಹುದಿತ್ತು ಶಿಚಿಪ್‌ತ್ಸೋವ್. ನೀನು ಕುಡೀತಾ ಕೂತಿದ್ಯ? ಅಥವಾ ನಿನಗೆ ಕಾಯಿಲೆ ಆಗಿದ್ಯ? ಅಲ್ಲ, ನೀನು ಮಾತೇಕೆ ಆಡ್ತಿಲ್ಲ?... ನಿನ್ನೇ ಕೇಳ್ತಿರೋದು... ಹುಷಾರು ತಪ್ಪಿದ್ಯ ನಿನಗೆ?' ಸಿಗೇವ್ ಕೇಳುತ್ತಾ ಹೋದ.

ಶಿಚಿಪ್‌ತ್ಸೋವ್ ಮಾತಾಡಲಿಲ್ಲ. ಸಿಗೇವ್, ಶಿಚಿಪ್‌ತ್ಸೋವ್ ಮುಖದ ಮೇಲೆ ಮೆತ್ತಿಕೊಂಡಿದ್ದ ಬಣ್ಣದ ಹೊರತಾಗಿ ಆತನ ಬೆವರಿದ ಹಣೆ, ವಿವರ್ಣವಾಗಿರುವ ಮುಖ, ತೊದಲುತ್ತಿರುವ ತುಟಿಗಳನ್ನ ಗಮನಿಸಿರಲಿಲ್ಲ. ಹಾಗೆಯೆ ಅವನ ಕೈಕಾಲುಗಳು ನಡುಗುತ್ತಿದ್ದವು. ಒಳ್ಳೆಯ ಸ್ವಭಾವವಿರಿಸಿಕೊಂಡೂ ದಡ್ಡನಂತಿದ್ದ ಶಿಚಿಪ್‌ತ್ಸೋವ್‌ನ ದೈತ್ಯ ದೇಹವೀಗ ಜರ್ಜರಿತವಾಗಿ ತೆಳ್ಳಗೆ ಕಾಣಿಸಿಲಾರಂಭಿಸಿತ್ತು. ಸಿಗೇವ್ ಕೋಣೆ ತುಂಬ ಕಣ್ಣು ಹಾಯಿಸಿ ನೋಡಿದ. ಒಂದು ಬಾಟಲ್, ಅಥವಾ ಒಂದು ಫ್ಲಾಸ್ಕ್ ಅಥವಾ ಇನ್ನೆಂಥದ್ದೋ ಒಂದು ಪಾತ್ರೆ ಕೂಡ ಅವನ ಕಣ್ಣಿಗೆ ಬೀಳಲಿಲ್ಲ.

'ನಿನಗೆ ಕಾಯಿಲೆ ಆಗಿದೆ ಅಂತ ನನಗೆ ಗೊತ್ತು. ನನಗೆ ಗೊತ್ತು, ನೀನು ಖಂಡಿತ ಕಾಯಿಲೆ ಮಲಗಿದ್ದೀ ಅಂತ... ಯಾಕೆಂದರೆ ನೀನು ನೀನಾಗಿ ಕಾಣ್ತಿಲ್ಲ...' ಅಂದ ಸಿಗೇವ್.

ಶಿಚಿಪ್‌ತ್ಸೋವ್ ಹಾಗೇ ನಿಶ್ಶಬ್ದವಾಗಿ ನಿರ್ಭಾವುಕ ಸ್ಥಿತಿಯಲ್ಲಿ ನೆಲ ನೋಡಲು ಆರಂಭಿಸಿದ.

'ಬಹುಶಃ... ನಿನಗೆ ಥಂಡಿಯಾಗಿರಬೇಕು...' ಎಂದು ಸಿಗೇವ್, ಶಿಚಿಪ್‌ತ್ಸೋವ್‌ನ ಕೈಗಳನ್ನ ಹಿಡಿದು ನೋಡಿದ. ಆಮೇಲೆ ತಕ್ಷಣ ಹೇಳಿದ: 'ಅರೆ... ನಿನ್ನ ಕೈಗಳು ಎಷ್ಟು ಬಿಸಿಯಾಗಿವೆ! ಹಾಗಾದರೆ ನಿನಗೆ ಮತ್ತೇನು ತೊಂದರೆ?'

'ನಾನು ಮನೆಗೆ ಹೋ... ಗಬೇಕು...' ಶಿಚಿಪ್‌ತ್ಸೋವ್ ಮಣಮಣಿಸಿದ.

'ಆದರೆ ನೀನೀಗ ಮನೇಲೇ ಇದ್ದೀಯ... ಇಲ್ವಾ ಹೇಳು?...' ಸಿಗೇವ್ ಕೇಳಿದ.

'ಇಲ್ಲ... ನಾನು ವ್ಯಾಜ್ಮಾಗೆ ಹೋಗಬೇಕು...'

'ಓಹ್ ಅಲ್ಲಿಗೆ ಬಿಟ್ಟು ಬೇರೆಲ್ಲಿಗೆ ಬೇಕಾದರೂ ಕೇಳು. ವ್ಯಾಜ್ಮಾಗೆ ಹೋಗಲಿಕ್ಕೆ ಮೂರು ವರ್ಷಗಳಾದರೂ ಬೇಕಾಗಬಹುದು. ಏನು? ನೀನು ಅಲ್ಲಿಗೆ ಹೋಗಿ ನಿನ್ನ ಅಪ್ಪ ಅಮ್ಮನನ್ನ ನೋಡಬೇಕಾ? ಹೇಳ್ತೀನಿ ಕೇಳು, ಅವರು ನಿನ್ನ ಜೊತೆಗಿನ ಎಲ್ಲ ಸಂಬಂಧಗಳನ್ನ ವರ್ಷಗಳ ಹಿಂದೆನೇ ದೂರಮಾಡಿಕೊಂಡಿದ್ದಾರೆ. ಈಗ ಅವರ ಸಮಾಧಿಗಳೂ ನಿನಗೆ ಸಿಗಲಾರವು...'

'ನನ್ನ ಮನೆ... ಗಳು ಅಲ್ಲಿವೆ...' ಎಂದ ಶಿಚಿಪ್‌ತ್ಸೋವ್ ಭಾರವಾಗಿ.

'ಇಂಥ ಮಸುಕು ಆಲೋಚನೆಗಳು ಸುಳೀಲಿಕ್ಕೆ ಆಸ್ಪದ ಕೊಡೋದು ಒಳ್ಳೇದಲ್ಲ. ಮನಸನ್ನ ಕೆಡಿಸೋ ಇಂಥ ಆಲೋಚನೆಗಳಿಗೆ ಎಣೆ ಇದೆಯೇನಪ್ಪಾ ಯಜಮಾನ? ನೀನು ಹುಷಾರಾಗಿರಬೇಕು. ಯಾಕೆಂದರೆ ನೀನು ನಾಳಿನ 'ದಿ ಟೆರಿಬಲ್ ತ್ಸಾರ್...' ನಾಟಕದಲ್ಲಿ 'ಮಿಟ್ಕ'ನ ಪಾತ್ರ ಮಾಡಬೇಕು. ಬೇರೆ ಯಾರೂ ಆ ಪಾತ್ರ ಮಾಡೋವರು ಇಲ್ಲ. ಮೊದಲು ಬಿಸಿಯಾಗಿರೋದು ಏನನ್ನಾದರೂ ಒಂದಿಷ್ಟು ಕುಡಿ. ಆಮೇಲೆ ಇಂದಿಷ್ಟು ಹರಳೆಣ್ಣೆ ತಗೊ. ಅದನ್ನ ತೆಗೆದುಕೊಳ್ಳೋಕೆ ನಿನ್ನ ಹತ್ರ ಒಂದಿಷ್ಟು ಹಣ ಇದೆಯಾ? ಅಥವಾ ನೀನು ಇಲ್ಲೇ ಇರು. ನಾನು ಹೋಗಿ ಅದನ್ನ ಕೊಂಡುಕೊಂಡು ತಂದುಬಿಡ್ತೀನಿ...'